


'ಕುಲವಧು' ಚಿತ್ರದ ಹಾಡು

ಆಧಾರಿತ 'ಚಕ್ರತೀರ್ಥ'ದಲ್ಲಿಯೂ ಬೇಂದ್ರೆಯವರ ಒಂದು ಹಾಡು ಬಳಸಲಾಯಿತು. ಟಿ.ಜಿ. ಲಿಂಗಪ್ಪ ಅವರ ಸಂಗೀತ ನೀಡಿದ 'ಕುಣಿಯೋಣು ಬಾರಾ ಕುಣಿಯೋಣು...' ಎಂಬ ಜನಪ್ರಿಯ ಕವಿತೆಯನ್ನು ಸಿನಿಮಾದಲ್ಲಿ ಅಳವಡಿಸಿಕೊಂಡರೂ ಹಾಡು ಜನಪ್ರಿಯವಾಗಲಿಲ್ಲ.

'ಅರಿಶಿಣ ಕುಂಕುಮ' ಚಿತ್ರದಲ್ಲಿ ನಿರ್ದೇಶಕ ಕೆ.ಎಸ್. ಎಲ್. ಸ್ವಾಮಿ ಅವರು ಬೇಂದ್ರೆಯವರ 'ಇಳಿದು ಬಾ ತಾಯಿ...' ಗೀತೆಯನ್ನು ಅಳವಡಿಸಿಕೊಂಡರು. ವಿಜಯಭಾಸ್ಕರ್ ಅವರು ಸಂಗೀತ ನೀಡಿ, ಪಿ.ಬಿ. ಶ್ರೀನಿವಾಸ ಅವರು ಹಾಡಿದ ಈ ಗೀತೆಯು ಅತ್ಯಂತ ಜನಪ್ರಿಯವಾಯಿತು.

ಪುಟ್ಟಣ್ಣ ಕಣಗಾಲ್ ಅವರು 1971ರಲ್ಲಿ ತೆರೆಗೆ ತಂದ 'ಶರಪಂಜರ' ಚಿತ್ರದಲ್ಲಿಯೂ ಬೇಂದ್ರೆಯವರ 'ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ' ಗೀತೆಯನ್ನು ಬಳಸಲಾಯಿತು. ವಿಜಯಭಾಸ್ಕರ್ ಸಂಗೀತ ಸಂಯೋಜಿಸಿದ ಗೀತೆಗೆ ಪಿ.ಬಿ. ಶ್ರೀನಿವಾಸ್ ಮತ್ತು ಪಿ. ಸುಶೀಲಾ ಅವರು ಧ್ವನಿ ನೀಡಿದ್ದರು.

ಅದಾದ ಮೇಲೆ ಸುಮಾರು ಒಂದು ದಶಕ ಬೇಂದ್ರೆ ಕವಿತೆಗಳು ಬೆಳ್ಳಿತೆರೆಯ ಮಂದಿಯನ್ನು ಸೆಳೆಯಲಿಲ್ಲ. 1984ರಲ್ಲಿ ತೆರೆಕಂಡ ಪಟ್ಟಾಭಿರಾಮ ರೆಡ್ಡಿ ಅವರ 'ಶೃಂಗಾರಮಾಸ' ಚಿತ್ರದಲ್ಲಿ ಟೈಟಲ್ ಸಾಂಗ್ ಆಗಿ ಬೇಂದ್ರೆಯವರ 'ಬಂತಿದೋ ಶೃಂಗಾರಮಾಸ..' ಗೀತೆಯನ್ನು ಬಳಸಲಾಯಿತು. ಹೆಸರಾಂತ ಸರೋದ್ ವಾದಕ ಪಂಡಿತ್ ರಾಜೀವ ತಾರಾನಾಥ್ ಅವರು



ಸಂಗೀತ ಸಂಯೋಜಿಸಿದ ಗೀತೆಯನ್ನು ವಾಣಿ ಜಯರಾಂ ಅವರು ಹಾಡಿದ್ದರು. ಇದೇ ಗೀತೆಯು 'ಆಘಾತ' (1995) ಚಿತ್ರದಲ್ಲಿಯೂ ಬಳಕೆಯಾಗಿದೆ. ವಿಜಯಭಾಸ್ಕರ್ ಸಂಗೀತ ನೀಡಿರುವ ಗೀತೆಯನ್ನು ಕುಸುಮಾ ಹಾಡಿದ್ದಾರೆ.

ವಿ. ಮನೋಹರ್ ಸಂಗೀತ ನೀಡಿದ 'ಸಿಂಗಾರಿ ಬಂಗಾರಿ' ಚಿತ್ರದಲ್ಲಿ ಬೇಂದ್ರೆಯವರ 'ಶುಭ ನುಡಿಯೇ ಶಕುನದ ಹಕ್ಕಿ...' ಗೀತೆ ಬಳಸಲಾಯಿತು.

'ಭೂಮಿ ತಾಯಿ ಚೊಚ್ಚಲ ಮಗ' ಚಿತ್ರದ ಹಾಡು

